ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,
ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5067/2014

ಪ್ರಾ ಸಾ 3 ಚಾ ಸಾ 3

ಹೆಸರುಃ ಶಿವಲಿಂಗಯ್ಯ

ತಂದೆಯ ಹೆಸರುಃ ಕರಿಯಪ್ಪ

ವಯಸ್ಸುಃ 51 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ಗಣಂಗೂರು ಗ್ರಾಮ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ವಿಚಾರಣೆ**

ಸಾಕ್ಷಿಯನ್ನು ದಿಃ 08.03.2021 ರಂದು ನ್ಯಾಯಾಲಯಕ್ಕೆ ಕರೆಸಿ ಪ್ರಮಾಣವಚನ ಮಾಡಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನನಗೆ ಚಾ ಸಾ 1, 24 ಗೊತ್ತಿಲ್ಲ. ಆದರೆ ಚಾ ಸಾ 2 ಗೊತ್ತು. ಅಂದಾಜು 10 ವರ್ಷದ ಹಿಂದೆ ಪೊಲೀಸರು ಗಣಂಗೂರು ಗ್ರಾಮದ ಬಳಿ ಮೈಸೂರು - ಬೆಂಗಳೂರು ರಸ್ತೆಯಲ್ಲಿ ಈಗ ತೋರಿಸಿದ ನಿ ಪಿ 22 ಕ್ಕೆ ಸಹಿ

ಮಾಡಿರುತ್ತೇನೆ. ಅದರಲ್ಲಿರುವ ವಿಚಾರಗಳು ಗೊತ್ತಿಲ್ಲ. ದೇವಸ್ಥಾನದ ಪಕ್ಕದಲ್ಲಿ ಮಲ್ಲೇಗೌಡನ ಕೊಪ್ಪಲಿಗೆ ಹೋಗುವ ರಸ್ತೆ ಇದೆ. ನಿ ಪಿ 22 ಕ್ಕೆ ಸಹಿ ಮಾಡುವಾಗ ಚಾ ಸಾ 2 ಸಹ ಹಾಜರಿದ್ದು ನಿ ಪಿ 22 ಕ್ಕೆ ಸಹಿ ಮಾಡಿರುತ್ತಾನೆ. ಆ ಸಮಯದಲ್ಲಿ ಚಾ ಸಾ 1 ಸ್ಥಳದಲ್ಲಿ ಇರಲಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯ್ತು.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

2. ನಿ ಪಿ 22 ರ ಸಮಯದಲ್ಲಿ ಚಾ ಸಾ 1 ಸ್ಥಳದಲ್ಲಿ ಹಾಜರಿದ್ದು ದಿಃ 02.06.2011 ರಂದು ಚಾ ಸಾ 1 ಇದೇ ಸ್ಥಳದಲ್ಲಿ ಈ ಪ್ರಕರಣದ ಆರೋಪಿಗಳು ತನ್ನನ್ನು ಮತ್ತು ತನ್ನ ತಾಯಿಯನ್ನು ಭೈರೇಗೌಡನ ಕೊಪ್ಪಲಿನ ಬಳಿ ತಮ್ಮ ಕಾರಿಗೆ ಹತ್ತಿಸಿಕೊಂಡು ಒಡವೆಗಳನ್ನು ದೋಚಿಕೊಂಡು ಕಾರಿನಿಂದ ತಳ್ಳಿದ ಸ್ಥಳ ಎಂದು ತೋರಿಸಿದ ಮೇರೆಗೆ ಪೊಲೀಸರು ಈಗ ಓದಿ ಹೇಳಿದ ನಿ ಪಿ 22 ಮಹಜರನ್ನು ಬರೆದು ಚಾ ಸಾ 1 ಹಾಜರು ಮಾಡಿದ ಕಳ್ಳರು ತನ್ನ ಮತ್ತು ತನ್ನ ತಾಯಿಯ ಕೈಗಳಿಗೆ ಕಟ್ಟಿದ್ದ ಟವಲ್ ನ ಬಾಗಗಳೆಂದು ಮೂರು ಬಾಗಗಳನ್ನು ಹಾಜರು ಮಾಡಿದ ಮೇರೆಗೆ ಪೊಲೀಸರು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ನನಗೆ ನಿ ಪಿ 22 ರ

ಸಂಪೂರ್ಣ ವಿಚಾರ ಗೊತ್ತಿದ್ದರೂ ಸಹ ನಾನು ಸರಿಯಾಗಿ ಸಾಕ್ಷಿ ನುಡಿಯುತ್ತಿಲ್ಲ ಎಂದರೆ ಸರಿಯಲ್ಲ.

(ಆರೋಪಿಗಳು ತಲೆ ಮರೆಸಿಕೊಂಡಿರುತ್ತಾರೆ.)

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)